


## ಹಿಂದಣ ಹೆಜ್ಜೆಯ ಅರಿವು

ಕನ್ನಡ ನುಡಿಪರಂಪರೆಯನ್ನು ತಮ್ಮ ಅನುಭಾವದ ಮುಖೇನ ಬೆಳಗಿದ ದಾರ್ಶನಿಕರಲ್ಲಿ ಅಲ್ಲಮ ಇತ್ತ ಅರಿವು ಮಹತ್ತರವಾದುದು. 'ಹಿಂದಣ ಹೆಜ್ಜೆಯ ಕಂಡಲ್ಲದೆ ನಿಂದ ಹೆಜ್ಜೆಯನರಿಯಬಾರದು...' ಎಂಬ ಅಲ್ಲಮನುಡಿಯು ಇಂದಿನ ಹೆಜ್ಜೆಯನ್ನು ಸಮರ್ಥವಾಗಿ ಇಡಬೇಕಾದರೆ ಹಿಂದಣ ಹೆಜ್ಜೆಗಳನ್ನು ಸೂಕ್ಷ್ಮವಾಗಿ ಅರಿಯುವುದು ಅತ್ಯಗತ್ಯ ಎಂಬುದನ್ನು ಪ್ರತಿಧ್ವನಿಸುತ್ತದೆ. ಗ್ರಾಮಲೋಕದ ಅನುಭಾವಿಕ ಜಾನಪದರು 'ಹಿಂದ್ಕು ಮುಂದ್ಕು ನೋಡ್ಕಂಡು ಸರೀಗ ನಡಿ' ಎಂದಿರುವ ನುಡಿಯೂ ಇವತ್ತಿನವರಲ್ಲಿ ಬೆಳಗಬೇಕಾದ ಅವತ್ತಿನವರ ತಿಳಿವನ್ನೇ ಸೂಚಿಸುತ್ತದೆ. ಇಂಥ ನುಡಿಬೆಳಗು ನಮ್ಮ ಬದುಕಿಗೆ ಮಾತ್ರವಲ್ಲದೇ, ಬೌದ್ಧಿಕ ನಡೆಗೂ ಮಾರ್ಗದರ್ಶಕವಾಗಿದೆ. ಕನ್ನಡ ಸಂಶೋಧನ ಚರಿತ್ರೆಯಲ್ಲಿ ವಿದ್ವನ್ಮಣಿಗಳಾಗಿ ಬೆಳಗಿದ ಹಿಂದಣ ಸಂಶೋಧಕ ಸಾಲುದೀಪಗಳನ್ನು ಇಂದಿನ–ಹೊಸತಲೆಮಾರಿನ ಸಂಶೋಧಕರು ತಮ್ಮೊಳಗೆ ಅಂತಸ್ಥ ಮಾಡಿಕೊಂಡು ಸಾಗಬೇಕಿದೆ. ಹಿಂದಿನ ಸಂಶೋಧನ ಮಹಾಶಯರು ಸಾಗಿಬಂದಿರುವ ಹಾದಿಯೊಳಗೆ ಕಾಣುವ ನುಡಿಬದ್ಧತೆ, ಪ್ರಬುದ್ಧತೆ, ಪ್ರಖರ ಪಾಂಡಿತ್ಯ, ಶೋಧನಶಿಸ್ತು, ಸಂಯಮ, ಬಹುಶಿಸ್ತೀಯ ತಿಳಿವು, ಅವಿರತ ಕ್ಷೇತ್ರಕಾರ್ಯ, ತರ್ಕಬದ್ಧ ನಿರೂಪಣೆ, ಆರೋಗ್ಯಪೂರ್ಣ ಸಂವಾದ, ತಪ್ಪು–ಒಪ್ಪುಗಳ ವಿನಯಪೂರ್ಣ ಸ್ವೀಕಾರ ಮೊದಲಾದ ಗುಣಗಳು ವರ್ತಮಾನದ ಸಂಶೋಧಕರಿಗೆ ಮಾದರಿಯಾಗಿವೆ. ಹೀಗಾಗಿ ಹಿರಿಯರ ಇಂಥ ಮಹಾಮಾರ್ಗವನ್ನು ನಮ್ಮ ಕಾಲದ ಸಂಶೋಧಕರು ಅರಿಯುವ ಮೂಲಕ ತಮ್ಮ ಸಂಶೋಧನ ಮಾರ್ಗವನ್ನು ಬೆಳಗಿಕೊಳ್ಳುವಂತಾಗಲಿ ಎಂಬ ಮಹದಾಶಯದಲ್ಲಿ "ಹಿಂದಣ ಹೆಜ್ಜೆಯ ಅರಿವು" ಎಂಬ ಕಾಲಂ ಆರಂಭಿಸಲಾಗಿದೆ. ಕನ್ನಡ ಸಂಶೋಧನ ಚರಿತ್ರೆಯಲ್ಲಿ ಜಾನಪದ, ಹಳಗನ್ನಡ, ನಡುಗನ್ನಡ, ಹೊಸಗನ್ನಡ, ವ್ಯಾಕರಣ, ನಿಘಂಟು, ಛಂದಸ್ಸು, ಭಾಷಾವಿಜ್ಞಾನ, ಕಾವ್ಯಮೀಮಾಂಸೆ ಮೊದಲಾದ ಕ್ಷೇತ್ರಗಳಲ್ಲಿ ಹಿರಿಯ ಸಂಶೋಧಕರು ಮೂಡಿಸಿರುವ ಗುರುತರವಾದ ಹೆಜ್ಜೆಗಳನ್ನು ಅರಿಯುವ ನಿಟ್ಟಿನಲ್ಲಿ ಪ್ರತೀ ತಿಂಗಳು ಪ್ರಾತಿನಿಧಿಕ ಸಂಶೋಧನ ಲೇಖನವೊಂದನ್ನು ಇಲ್ಲಿ ನೀಡಲಾಗುವುದು. ಕನ್ನಡ ಸಂಶೋಧನಯಾನದ ಹಿಂದಣ ಹೆಜ್ಜೆಯ ಅರಿತು ಇಂದಿನ ಹೆಜ್ಜೆಯು ದೀಪ್ತಗೊಳ್ಳಲಿ ಎಂಬ ಆಶಯ ನಮ್ಮದು.

# ನನ್ನಿಯೊಳಿನತನಯಂ

ಎಂ. ಎಂ. ಕಲಬುರ್ಗಿ

Article Link: https://aksharasurya.com/2024/04/m-m-kalburgi.php

DOI: https://doi.org/10.5281/zenodo.10937959

**ಆಶಯ:**

## ಸಮಗ್ರ ಸಂಶೋಧಕ–ಸತ್ಯಶೋಧಕರು ಡಾ.ಎಂ.ಎಂ.ಕಲಬುರ್ಗಿ

"ಸಂಶೋಧನೆಯೆನ್ನುವುದು ಅಲ್ಪ ವಿರಾಮ, ಅರ್ಧವಿರಾಮಗಳ ಮೂಲಕ ಪೂರ್ಣವಿರಾಮಕ್ಕೆ ಸಾಗುವ ಕ್ರಿಯೆಯಾಗಿದೆ... ಸಂಶೋಧನೆ ಎನ್ನುವುದು ಸುಳ್ಳು ಇತಿಹಾಸದ ಮೂಲಕ ವರ್ತಮಾನದಲ್ಲಿ ಹುಟ್ಟುಹಾಕುತ್ತಲಿರುವ ಶೋಷಣೆಯನ್ನು ಹತ್ತಿಕ್ಕಲು, ನಿಜ ಇತಿಹಾಸವನ್ನು ಶೋಧಿಸಿಕೊಡುವುದು ಸಂಶೋಧಕನ ಕರ್ತವ್ಯವಾಗಿದೆ. ಅಂದರೆ ಸಂಶೋಧನೆಯೆಂಬುದು ಕೇವಲ ಇತಿಹಾಸದ ಶೋಧವಲ್ಲ. ಸುಳ್ಳು ಇತಿಹಾಸವನ್ನು ಮುಂದುಮಾಡಿಕೊಂಡು ವರ್ತಮಾನವನ್ನು ದುರುಪಯೋಗ ಮಾಡಿಕೊಳ್ಳುವವರೊಂದಿಗೆ ನಡೆಸುವ ಹೋರಾಟವೂ ಆಗಿದೆ. ಸತ್ಯವೆಂಬ ಭೂತಕಾಲದ ಬಲದಿಂದ ಅಸತ್ಯವೆಂಬ ವರ್ತಮಾನ ಕಾಲವನ್ನು ಸರಿಪಡಿಸುವುದಾಗಿದೆ..." ಎನ್ನುವ ಮೂಲಕ ಸತ್ಯಶೋಧಕರೂ ಸಮಗ್ರ ಸಂಶೋಧಕರೂ ಎಂದು ಪ್ರಸಿದ್ಧರಾದ ಡಾ.ಎಂ.ಎಂ.ಕಲಬುರ್ಗಿ ಅವರು ಈ ನಾಡು ಕಂಡ ಶ್ರೇಷ್ಠ ಚಿಂತಕರು. ಅವರ ಅಧ್ಯಯನ ಮತ್ತು ಕೊಡುಗೆಗಳು ಶಾಸನಶಾಸ್ತ್ರ, ಸಾಹಿತ್ಯ ಚರಿತ್ರೆ, ಛಂದಸ್ಸು, ಇತಿಹಾಸ, ವಾಸ್ತುಶಿಲ್ಪ, ಗ್ರಂಥ ಸಂಪಾದನೆ, ಹಸ್ತಪ್ರತಿಶಾಸ್ತ್ರ, ಜಾನಪದ, ಸ್ಥಳನಾಮಗಳ ಅಧ್ಯಯನ, ಸಾಹಿತ್ಯ ವಿಮರ್ಶೆ ಮುಂತಾದ ಬಹುಕ್ಷೇತ್ರಗಳಲ್ಲಿ ಹರಡಿಕೊಂಡಿವೆ. ಇವೆಲ್ಲದರ ಹಿನ್ನೆಲೆಯಲ್ಲಿ ಸಾಂಸ್ಕೃತಿಕ ಅಧ್ಯಯನದ ವಿಶಾಲವಾದ ಪರಿಪ್ರೇಕ್ಷ್ಯವುಳ್ಳ ಕಲಬುರ್ಗಿ ಅವರದು ಬಹುಮುಖ ವ್ಯಕ್ತಿತ್ವ; ಬಹುಮುಖ ಪ್ರತಿಭೆ; ಬಹುಮುಖ ಕಾರ್ಯಯೋಜನೆ. ಕನ್ನಡದ ಶ್ರೇಷ್ಠ ಪ್ರಾಧ್ಯಾಪಕರಾಗಿ, ಉನ್ನತಶ್ರೇಣಿಯ ಸಂಶೋಧಕರಾಗಿ, ಸಮರ್ಥ ಸಂಶೋಧನ ಮಾರ್ಗದರ್ಶಕರಾಗಿ, ವಿಭಾಗದ ದಕ್ಷ ಅಧ್ಯಕ್ಷರಾಗಿ, ಕನ್ನಡ ವಿಶ್ವವಿದ್ಯಾಲಯದ ಮಾದರಿ ಕುಲಪತಿಗಳಾಗಿ, ಅನೇಕ ವಿನೂತನ ಯೋಜನೆಗಳ ಯೋಜಕರಾಗಿ, ಹಲವಾರು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಸಂಘ–ಸಂಸ್ಥೆಗಳ ನಿರ್ದೇಶಕರಾಗಿ ಅವರು ಮಾಡಿದ ಕಾರ್ಯಚಟುವಟಿಕೆಗಳು ವಿಶೇಷ ಅಸ್ಮಿತೆಯುಳ್ಳ ಚಾರಿತ್ರಿಕ ಮಹತ್ವಕ್ಕೆ ಸಾಕ್ಷಿಯಾಗಿವೆ.

ಮಲ್ಲೇಶಪ್ಪ ಮಡಿವಾಳಪ್ಪ ಕಲಬುರ್ಗಿಯವರು 1938ರ ನವಂಬರ 28ರಂದು ಬಿಜಾಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ಯರಗಲ್ಲ ಗ್ರಾಮದಲ್ಲಿ ಜನಿಸಿದರು. ಇವರ ತಾಯಿ ಗುರಮ್ಮ; ತಂದೆ ಮಡಿವಾಳಪ್ಪ. ಕಲಬುರ್ಗಿಯವರು ಕರ್ನಾಟಕ ವಿಶ್ವವಿದ್ಯಾಲಯದಿಂದ 1960ರಲ್ಲಿ ಬಿ.ಎ. ಮತ್ತು 1962ರಲ್ಲಿ ಎಂ.ಎ. ಪದವಿಗಳನ್ನು ಪ್ರಥಮ ಸ್ಥಾನದೊಂದಿಗೆ ಪಡೆದರು. 1968ರಲ್ಲಿ ಅವರು ಡಾ.ಆರ್.ಸಿ.ಹಿರೇಮಠ

ಅವರ ಮಾರ್ಗದರ್ಶನದಲ್ಲಿ ಸಲ್ಲಿಸಿದ, 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ' ಎಂಬ ಮಹಾಪ್ರಬಂಧಕ್ಕೆ ಪಿ.ಎಚ್.ಡಿ. ಪದವಿ ಸಂದಿತು. 1962ರಲ್ಲಿ ಕರ್ನಾಟಕ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ತಮ್ಮ ವೃತ್ತಿಜೀವನವನ್ನು ಪ್ರಾರಂಭಿಸಿದ ಕಲಬುರ್ಗಿಯವರು, 1966ರ ವರ್ಷದಲ್ಲಿ ವಿಶ್ವವಿದ್ಯಾಲಯದ 'ಕನ್ನಡ ಅಧ್ಯಯನ ಪೀಠ'ದಲ್ಲಿ ಅಧ್ಯಾಪಕರಾಗಿ ನೇಮಕಗೊಂಡರು. ಅಲ್ಲಿ ಅನೇಕ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಹುದ್ದೆಗಳನ್ನು ನಿರ್ವಹಿಸಿ ಸುಮಾರು ಹತ್ತೊಂಬತ್ತು ವರ್ಷಗಳ ಕಾಲ ಪ್ರಾಧ್ಯಾಪಕರಾಗಿದ್ದ ಕಲಬುರ್ಗಿಯವರು, ಒಟ್ಟಿನಲ್ಲಿ ಮೂವತ್ತೊಂಬತ್ತು ವರ್ಷಗಳು ಶಿಕ್ಷಕ ವೃತ್ತಿಯಲ್ಲಿ ತೊಡಗಿಕೊಂಡಿದ್ದರು. ಅವರು ಆ ಅವಧಿಯಲ್ಲಿ ಅನೇಕ ಸಂಶೋಧನ ಯೋಜನೆಗಳನ್ನು ಯಶಸ್ವಿಯಾಗಿ ನಡೆಸಿಕೊಟ್ಟರು. 1998–2001ರ ಕಾಲಾವಧಿಯಲ್ಲಿ ಕಲಬುರ್ಗಿಯವರು ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದರು. ಅಲ್ಲಿಯೂ ಅನೇಕ ಮಹತ್ವದ ಯೋಜನೆಗಳನ್ನು ಆಗುಮಾಡಿದ ಕಲಬುರ್ಗಿಯವರು ನಿವೃತ್ತಿಯ ನಂತರವೂ ಸಂಶೋಧನಾ ಚಟುವಟಿಕೆಗಳಲ್ಲಿಯೇ ಮಗ್ನರಾದರು. ಕರ್ನಾಟಕ ಸರ್ಕಾರವು ಪ್ರಕಟಿಸಿದ ಹದಿನೈದು ಸಂಪುಟಗಳ 'ವಚನಸಾಹಿತ್ಯ ಸಂಪುಟ' ಮಾಲೆಗೆ ಅವರು ಪ್ರಧಾನ ಸಂಪಾದಕರಾಗಿದ್ದರು. ಹಾಗೆಯೇ 'ಸಮಗ್ರ ಕೀರ್ತನ ಸಂಪುಟ'ಗಳ ಸಂಪಾದಕ ಮಂಡಳಿಯ ಸದಸ್ಯರೂ ಆಗಿದ್ದರು. "ದುಡಿಯುವವನ ಮನಸ್ಸು ಸ್ವಚ್ಛವಿರುತ್ತದೆ" ಎಂಬ ಡಾ.ಫ.ಗು.ಹಳಕಟ್ಟಿಯವರ ವಾಕ್ಯ ಇವರ ಎಳೆಯ ಮನಸ್ಸನ್ನು ಪ್ರಭಾವಿಸಿದ್ದಿತು. "ಜನಮೆಚ್ಚಿ ನಡೆಕೊಂಡರೇನುಂಟು ಲೋಕದಿ ಮನಮೆಚ್ಚಿ ನಡೆಕೊಂಬುದೇ ಚೆಂದವು" ಎಂದು ಮುನ್ನಡೆದು ಮಹಾಮಾರ್ಗ ಕ್ರಮಿಸಿದ ಕ್ರಿಯಾಶೀಲ ವಿದ್ವಾಂಸರು ಡಾ. ಕಲಬುರ್ಗಿಯವರು.

ಹಿರಿಯ ವಿದ್ವಾಂಸರಾದ ಡಾ.ಟಿ.ವಿ.ವೆಂಕಟಾಚಲಶಾಸ್ತ್ರಿ ಅವರು ಹೇಳುವಂತೆ, "ಕನ್ನಡದ ಹೊಲದಲ್ಲಿ ಕೃಷ್ಣಶಾಸ್ತ್ರಿಗಳು ಕೃಷಿ ಮಾಡಿ ತೆಗೆದ ಬೆಳೆಯಲ್ಲಿ ತಮಗಾಗಿ ತೆಗೆದದ್ದು ಒಂದು ಪಾಲಾದರೆ, ಇತರರಿಗಾಗಿ ತೆಗೆದದ್ದು ಮೂರು ಪಾಲು."–ಇದು ಪ್ರೊ. ಎ.ಆರ್. ಕೃಷ್ಣಶಾಸ್ತ್ರಿಗಳನ್ನು ಕುರಿತದ್ದು, ಈ ಮಾತು ಪ್ರೊ. ಕಲಬುರ್ಗಿಯವರಿಗೆ ಸಹ ಚೆನ್ನಾಗಿ ಅನ್ವಯಿಸುತ್ತದೆ. ಕಲಬುರ್ಗಿ ತರಗತಿಯ ಸ್ಫೂರ್ತಿಯುತ ಪ್ರವಚನಗಳಿಂದ ವಿದ್ಯಾರ್ಥಿಗಳಲ್ಲಿ ಕನ್ನಡ ಭಾಷೆ, ಸಾಹಿತ್ಯ, ಜನಜೀವನ, ಇತಿಹಾಸಗಳ ಬಗ್ಗೆ ಪ್ರೀತಿ, ಅಭಿಮಾನ ಹುಟ್ಟುವಂತೆ ಮಾಡಿದ್ದಾರೆ. ವಿದ್ಯಾರ್ಥಿಗಳಿಗೆ ಪಿಎಚ್.ಡಿ. ಪದವಿ ನಿಮಿತ್ತವಾಗಿ ಕನ್ನಡದಲ್ಲಿ ಸಂಶೋಧನೆ ನಡೆಸಲು ವಿಷಯವನ್ನು ಸೂಚಿಸಿ, ಮಾರ್ಗದರ್ಶನವನ್ನೂ ಶ್ರಮವಹಿಸಿ ಮಾಡಿ, ಪ್ರಕಟನೆಗೆ ಏರ್ಪಾಡುಗಳನ್ನೂ ತಾವೇ ಮಾಡಿಕೊಟ್ಟಿದ್ದಾರೆ... ಇವರು ಹೆಚ್ಚಿನ ಉತ್ಸಾಹದಿಂದ, ಹರಕೆ ಹೊತ್ತವರ ಹಾಗೆ ತಮ್ಮ ಮೇಲೆ ಜವಾಬ್ದಾರಿ ಹಾಕಿಕೊಂಡು ವಿದ್ಯಾರ್ಥಿಗಳನ್ನು ಬೆಳೆಸಿದ್ದಾರೆ, ಕನ್ನಡದ ಕೆಲಸಕ್ಕೆ ತೊಡಗಿಸಿದ್ದಾರೆ... ಇದರಲ್ಲಿ ಬಹುಶಃ ಇತರರಿಗಿಂತ ಅವರ ಸಾಧನೆ ದೊಡ್ಡದು. ಈ ಭಾಗದ ವಿದ್ಯಾರ್ಥಿಗಳಿಗೆ ಕಲಬುರ್ಗಿ ಒಂದು ರೀತಿಯಲ್ಲಿ "ವಿದ್ಯಾರ್ಥಿ ಕಲ್ಪತರು", ಅವರ ಪ್ರಭಾವಲಯಕ್ಕೆ ಒಳಗಾಗದವರೇ ಇಲ್ಲ. ಅವರಿಂದ ಸಲಹೆ ಸೂಚನೆಗಳನ್ನು ಪಡೆಯದ ವಿದ್ಯಾರ್ಥಿಗಳೇ ಇಲ್ಲವೆಂದರೂ ನಡೆಯುತ್ತದೆ... ಅವರಿಗೆ ಹಿರಿಯರಲ್ಲಿ ಗೌರವ, ಕಿರಿಯರಲ್ಲಿ ವಿಶ್ವಾಸ. ಇಬ್ಬರ ರಚನೆಗಳನ್ನೂ, ಕಾರ್ಯಗಳನ್ನೂ ಅವರು

ಪ್ರೋತ್ಸಾಹಿಸಿದ್ದಾರೆ. ಇದಕ್ಕಾಗಿ ಕನ್ನಡ ನಾಡಿನ ಮಠ ಮಾನ್ಯಗಳ, ಸಂಘ ಸಂಸ್ಥೆಗಳ ಹಿರಿಯರನ್ನೂ ಗೆಳೆಯರನ್ನೂ ಸಂಪರ್ಕಿಸಿ, ಬರಹಗಳ ಪ್ರಕಟನೆಗೆ ಏರ್ಪಾಡುಗಳು ಬೇಕೋ, ಅವನ್ನು ತಮ್ಮ ಶಕ್ತಿ ಬಳಸಿ ಮಾಡಿದ್ದಾರೆ... ಇದು ಶ್ರೀಯವರು, ಕೃಷ್ಣಶಾಸ್ತ್ರಿಗಳು ಮೊದಲಾದ ಮಹನೀಯರು ಮಾಡಿದಂಥ ಆ ಮಹಾಮಾರ್ಗದಲ್ಲಿಯೇ ಕಲಬುರ್ಗಿಯವರೂ ಮಾಡಿದ್ದಾರೆ."

ಸಂಶೋಧನ ಕ್ಷೇತ್ರದಲ್ಲಿ, ಹೊಸದಾಗಿ ತಾವು ಶೋಧಿಸಿದ ಶೋಧ ಮತ್ತು ಬೇರೆಯವರು ಶೋಧಿಸಿದ ಆಕರಗಳನ್ನು ಬಳಸಿ ಮಾಡುವ ಶೋಧ ಎಂದು ಎರಡು ರೀತಿಯಲ್ಲಿ ಸಂಶೋಧನೆಯನ್ನು ಗುರುತಿಸಲಾಗುತ್ತದೆ. ಸಾಮಾನ್ಯವಾಗಿ ಇನ್ನೊಬ್ಬರು ಶೋಧಿಸಿದ ಆಕರಗಳನ್ನು ಬಳಸಿ ಸಂಶೋಧನೆ ಮಾಡುವವರು ವಿಪುಲ. ಡಾ. ಕಲಬುರ್ಗಿಯವರು ಮಾತ್ರ ಹೊಸ ಆಕರಗಳನ್ನು ಶೋಧಿಸಿ, ಇನ್ನೊಬ್ಬರು ಶೋಧಿಸಿದ ಆಕರಗಳನ್ನು ಬಳಸಿ ಸಂಶೋಧನೆ ಮಾಡಿದ್ದಾರೆ. ಕನ್ನಡ ಸಂಶೋಧನೆಯ ಇತಿಹಾಸದಲ್ಲಿ ಆಕರನಿಷ್ಠಶೋಧ, ವ್ಯಾಖ್ಯಾನನಿಷ್ಠಶೋಧ–ಹೀಗೆ ಎರಡು ಮಜಲುಗಳು ಕಂಡುಬರುತ್ತವೆ. ಈ ಎರಡು ಮಜಲುಗಳಲ್ಲಿಯೂ ಇವರು ದುಡಿದಿದ್ದಾರೆ. ಸಂಶೋಧನೆ ಏಕಶಿಸ್ತೀಯ ಅಧ್ಯಯನಕ್ಷೇತ್ರವಲ್ಲ, ಬಹುಶಿಸ್ತೀಯ ಅಧ್ಯಯನಕ್ಷೇತ್ರ. ಈ ಮಾತಿಗೆ ಅರ್ಥ ತುಂಬುವಂತೆ ಸಂಸ್ಕೃತಿ, ಇತಿಹಾಸ, ಶಾಸನ, ಜಾನಪದ, ವ್ಯಾಕರಣ, ಛಂದಸ್ಸು, ಹಸ್ತಪ್ರತಿಶಾಸ್ತ್ರ, ಗ್ರಂಥಸಂಪಾದನಾಶಾಸ್ತ್ರ, ನಾಮಶಾಸ್ತ್ರ ಇತ್ಯಾದಿ ಕ್ಷೇತ್ರಗಳಲ್ಲಿ ಇವರು ಕೆಲಸ ಮಾಡಿದ್ದಾರೆ. ಇವುಗಳನ್ನು ಬಳಸಿಕೊಂಡು ಅಂತರ್ಶಿಸ್ತೀಯ ಸಂಶೋಧನೆಯನ್ನು ಪೂರೈಸಿದ್ದಾರೆ. ಹೀಗೆ ಸಂಶೋಧನೆಯ ಎಲ್ಲ ಹಂತ, ಎಲ್ಲ ಆಯಾಮ, ಎಲ್ಲ ವಿಷಯಗಳನ್ನು ತೆಕ್ಕೆಗೆ ಅಳವಡಿಸಿಕೊಂಡು ದುಡಿಯುವವ ಸಮಗ್ರ ಸಂಶೋಧಕನೆನಿಸುತ್ತಾನೆ. ಈ ದೃಷ್ಟಿಯಿಂದ ಡಾ.ಕಲಬುರ್ಗಿಯವರು 'ಸಮಗ್ರ ಸಂಶೋಧಕ' ರೆನಿಸಿದ್ದಾರೆ. ಕಲಬುರ್ಗಿ ಅವರ ಪ್ರಮುಖ ಸಂಶೋಧನ ಗ್ರಂಥಗಳೆಂದರೆ, 'ಕವಿರಾಜಮಾರ್ಗ ಪರಿಸರದ ಕನ್ನಡಸಾಹಿತ್ಯ', 'ಸಾಹಿತ್ಯ ಸಂಪಾದನೆ, 'ವಚನಸಾಹಿತ್ಯದ ಪ್ರಾಚೀನ ಆಕರಕೋಶ', 'ಕನ್ನಡ ಅಧ್ಯಯನಪೀಠದ ಹಸ್ತಪ್ರತಿಸೂಚಿ ಸಂಪುಟ: 1, 6, 7, 8, 9, 10', 'ಶುದ್ಧಶೈವ ಮತ್ತು ಗೋಳಕಿಮಠ ಸಂಪ್ರದಾಯ, 'ವೀರಶೈವ ಇತಿಹಾಸ ಮತ್ತು ಭೂಗೋಲ' ಮೊದಲಾದವು.

ಮಾರ್ಗ ಶಬ್ದಕ್ಕೆ ಅನ್ವೇಷಣೆ, ದಾರಿ, ಪದ್ಧತಿಯೆಂದು ಮೂರು ಅರ್ಥಗಳಿವೆ. ಸಾಹಿತ್ಯ ಕ್ಷೇತ್ರದಲ್ಲಿ ಈ ಮೂರು ಬಗೆಯ ಕಾರ್ಯಮಾಡಿರುವ ಕಲಬುರ್ಗಿಯವರು, ತಮ್ಮ ಎಲ್ಲ ಸಂಶೋಧನ ಪ್ರಬಂಧಗಳ ಸಂಕಲನಗಳಾಗಿರುವ ಎಂಟೂ ಸಂಪುಟಗಳಿಗೆ (ಮಾರ್ಗ–1, ಮಾರ್ಗ–2, ಮಾರ್ಗ–3, ಮಾರ್ಗ–4, ಮಾರ್ಗ–5, ಮಾರ್ಗ–6, ಮಾರ್ಗ–7, ಮಾರ್ಗ–8) ಇಟ್ಟಿರುವ ಹೆಸರು 'ಮಾರ್ಗ'. ಇವರ ಪಿಎಚ್.ಡಿ. ಪ್ರಬಂಧದ ಹೆಸರೂ 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ' ಇವರಿಗೆ ಅರ್ಪಿಸಿರುವ ಅಭಿನಂದನ ಗ್ರಥದ ಹೆಸರೂ 'ಮಹಾಮಾರ್ಗ'. ಈ "ಮಾರ್ಗಪ್ರಜ್ಞೆ" ಇವರನ್ನು 'ಮಹಾಮಾರ್ಗದ ಪಥಿಕರನ್ನಾಗಿ' ರೂಪಿಸಿತು. ಕನ್ನಡ ಸೃಜನಸಾಹಿತ್ಯವು ನವೋದಯ, ನವ್ಯ ನವ್ಯೋತ್ತರವೆಂಬ ಘಟ್ಟಗಳನ್ನು ರೂಪಿಸುತ್ತ ಬಂದ ಹಾಗೆ, ಕನ್ನಡ ಸಂಶೋಧನ ಸಾಹಿತ್ಯವೂ ರೂಪಿಸಿಕೊಳ್ಳುತ್ತ

ಬಂದ ಸಾಮಗ್ರಿ ಶೋಧನಿಷ್ಠ, ವಿಶ್ಲೇಷಣನಿಷ್ಠ, ವ್ಯಾಖ್ಯಾನನಿಷ್ಠ ಘಟ್ಟಗಳಲ್ಲಿ ಇವರು ದುಡಿಯುತ್ತ ಬಂದರು. ಎರಡನೆಯದಾಗಿ ಕನ್ನಡ ಸಂಶೋಧನೆ ಆಗಾಗ ಅಳವಡಿಸಿಕೊಳ್ಳುತ್ತ ಬಂದ ಸಂಸ್ಕೃತಿ, ಶಾಸನ, ಜಾನಪದ, ನಾಮವಿಜ್ಞಾನ ಇತ್ಯಾದಿ ಹೊಸಹೊಸ ಕ್ಷೇತ್ರಗಳಲ್ಲಿಯೂ ಇವರು ತಮ್ಮ ಅಸ್ಮಿತೆ ಪ್ರಕಟಿಸಿದರು. ಹೀಗಾಗಿ ಈ ಎರಡೂ ಆಯಾಮಗಳನ್ನೊಳಗೊಂಡ ಇಲ್ಲಿಯ 700 ಪ್ರಬಂಧಗಳು ಕನ್ನಡ ಸಂಶೋಧನೆಯ ಎಲ್ಲ ಮಾದರಿಗಳನ್ನು ಒಳಗೊಂಡಿದ್ದು ಕನ್ನಡ ಸಾರಸ್ವತಲೋಕದ ಮಹತ್ತರ ಆಕರಗ್ರಂಥಗಳೂ ಅತ್ಯಮೂಲ್ಯ ಕಾಣ್ಕೆಗಳೂ ಆಗಿವೆ.

ಕಲಬುರ್ಗಿಯವರ ಸಾರಸ್ವತ ಸೇವೆ ಹಾಗೂ ಸಂಶೊಧನ ಸಾಧನೆಗಾಗಿ ಅನೇಕ ಪ್ರಶಸ್ತಿಗಳು ಮತ್ತು ಗೌರವಗಳನ್ನು ನೀಡಿ ಗೌರವಿಸಲಾಗಿದೆ. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವಪ್ರಶಸ್ತಿ, ಪಂಪ ಪ್ರಶಸ್ತಿ, ನೃಪತುಂಗ ಪ್ರಶಸ್ತಿ, ಚಿದಾನಂದ ಪ್ರಶಸ್ತಿ ಮತ್ತು ವಿಶ್ವಮಾನವ ಪ್ರಶಸ್ತಿಗಳು ಮೊದಲಾದವು. ಅವರ 'ಮಾರ್ಗ–4' ಎಂಬ ಕೃತಿಯು ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯನ್ನು ಗಳಿಸಿದೆ. ಅವರು ಬರೆದಿರುವ ಹಲವಾರು ಗ್ರಂಥ ಗಳು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪುಸ್ತಕ ಬಹುಮಾನಗಳನ್ನು ಪಡೆದಿವೆ. ಕಲಬುರ್ಗಿ–60, ಮಹಾಮಾರ್ಗ, ಸಮಗ್ರ ಸಂಶೊಧಕ ಮೊದಲಾದ ಗ್ರಂಥಗಳು ಕಲಬುರ್ಗಿ ಅವರಿಗೆ ಸಲ್ಲಿಸಲಾಗಿರುವ ಅಭಿನಂದನ ಗ್ರಂಥಗಳಲ್ಲಿ ಮುಖ್ಯವಾದವು.

ಮಹಾಭಾರತ ಮಹಾಕಾವ್ಯದ ಕರ್ಣನ ಪಾತ್ರವೂ ಮಹತ್ತರವಾದುದು. ಜನಮೂಲ ಕಥನಗಳಿಂದ ಹಿಡಿದು ಶಾಸ್ತ್ರೀಯ ಪಠ್ಯಗಳ ವರೆಗೂ ಕರ್ಣ ಪಾತ್ರವನ್ನು ವೈವಿಧ್ಯಮಯ ದೃಷ್ಟಿಕೋನಗಳಲ್ಲಿ ಅನಾವರಣ ಹಾಗೂ ಅನುಸಂಧಾನ ಮಾಡಿರುವ ಬಗೆಯು ಅನನ್ಯವಾದುದು. ಕನ್ನಡ ಸಾರಸ್ವತಲೋಕದಲ್ಲಿ ಕರ್ಣಕೇಂದ್ರಿತ ಪಂಪಾದಿಗಳ ಕಾವ್ಯಯಾನವಾಗಲೀ, ಶಂ.ಬಾ.ಜೋಶಿ, ಕುವೆಂಪು ಮೊದಲಾದವರ ವಿಮರ್ಶಾಯಾನವಾಗಲೀ ಕರ್ಣತ್ವದ ಪ್ರಭೆಯನ್ನು ಪುನರ್ ಮೌಲ್ಯೀಕರಣಕ್ಕೆ ಒಡ್ಡಿರುವುದು ಚೇತೋಹಾರಿಯಾಗಿದೆ. ಈ ದಿಸೆಯಲ್ಲಿ ಮಹಾಭಾರತ ಪಾತ್ರಲೋಕದಲ್ಲಿ ಅತ್ಯಂತ ದುರಂತ ಹಾಗೂ ದ್ವಂದ್ವಕ್ಕೆ ಈಡಾದ ಕರ್ಣನನ್ನು ಪಂಪನ ಪ್ರಜ್ಞೆಯಲ್ಲಿ ಮರುಓದುತ್ತಾ ಕಲಬುರ್ಗಿಯವರು ವಾಸ್ತವಿಕತೆಯ ಹುಡಕಾಟ ನಡೆಸಿರುವುದು ಹೊಸ ಸಂಶೋಧನೆಯ ಸಾಧ್ಯತೆ–ಬಾಧ್ಯತೆಗಳನ್ನು ಪ್ರತಿಬಿಂಬಿಸುತ್ತದೆ.

---

"ವರ್ಣಕಂ ಕತೆಯೊಳೊಡಂಬಡಂ ಪಡೆಯೆ" ವಿಕ್ರಮಾರ್ಜುನ ವಿಜಯವನ್ನು ಬರೆಯುವೆನೆನ್ನುವಲ್ಲಿ ಪಂಪ, ತನ್ನ ಕಾವ್ಯದ ಉದ್ದೇಶವನ್ನು ಸ್ಪಷ್ಟಪಡಿಸಿದ್ದಾನೆ.[1] ಆ ಮೇರೆಗೆ ಅವನು 'ಪುರಾಣಕಾಲ'ದ ಕೌರವ–ಪಾಂಡವ ಬದುಕಿನ ಕಥೆಯೊಂದಿಗೆ ತನ್ನ 'ವರ್ತಮಾನಕಾಲ'ದ ಕನ್ನಡಿಗರ ಜೀವನ ಮೌಲ್ಯಗಳನ್ನು ಒಡಂಬಡಿಸಿ "ಸಮಸ್ತಭಾರತ"ವನ್ನು ರಚಿಸಿರುವನು.

ಯಾವುದೇ ಕಾಲದ ಸಮಾಜವನ್ನು ವಿಶಿಷ್ಟ ಆದರ್ಶ, ಮೌಲ್ಯ, ನಂಬಿಕೆಗಳು ಮುನ್ನಡೆಸುತ್ತವೆ. ಇವುಗಳನ್ನು ಅರ್ಥಪೂರ್ಣವಾಗಿ ಬದುಕುವವರೇ ಆ ಯುಗದ ಪ್ರಾತಿನಿಧಿಕ ವ್ಯಕ್ತಿಗಳು. ವ್ಯಕ್ತಿವಿಶಿಷ್ಟವಾದ ಆದರ್ಶವನ್ನು ಸಮಾಜವಿಶಿಷ್ಟವಾದ ವಾಸ್ತವದಲ್ಲಿ ಬದುಕಲು ನಡೆಸಿದ ಪ್ರಯತ್ನವೇ ಇವರ ಆತ್ಮಕಥೆ. ಪಂಪ ಹೇಳುವ "ಇವರ್ಗಳಿಂ ಈ ಭಾರತಂ ಲೋಕಪೂಜ್ಯಂ" ಎನಿಸಿದ ಇಂಥ ಎಂಟು ಜನರಲ್ಲಿ ಕರ್ಣನೂ ಒಬ್ಬ. ಪಂಪ, ತನ್ನ ಕಾಲದ ಮೌಲ್ಯಗಳಾದ ತ್ಯಾಗ, ವೀರಗಳನ್ನು ಕರ್ಣನ ಈ ಪಾತ್ರದಲ್ಲಿ ತುಂಬಿ ಅದು 10ನೆಯ ಶತಮಾನದ ಕನ್ನಡ ನಾಡಿನ ಪರಿಸರಕ್ಕೆ ಸ್ಪಂದಿಸುವಂತೆ ಪ್ರಯತ್ನಿಸಿದ್ದಾನೆ. ಆದರೆ ಜಾತಿವಂತನಾಗಿಯೂ ಜಾತಿಹೀನನೆನಿಸಿದ, ಪಾಂಡವನಾಗಿಯೂ ಕೌರವನಲ್ಲಿ ನೆಲೆನಿಂತ, ಇದಕ್ಕಿಂತ ಕೌರವನಿಷ್ಠನಾಗಿಯೂ ಪಾಂಡವರನ್ನು ಕೊಲ್ಲದಿರುವ ಅವನ "ದುರಂತ" ಮತ್ತು "ದೌರ್ಬಲ್ಯ"ಗಳು ನಮ್ಮನ್ನು ತುಂಬ ಆಲೋಚನೆಗೆ ಒಳಗುಮಾಡುತ್ತವೆ. ಈ ದೌರ್ಬಲ್ಯ–ದುರಂತಗಳನ್ನು ಅನುಭವಿಸುತ್ತಲೇ ತ್ಯಾಗಗುಣ, ಸ್ವಾಮಿನಿಷ್ಠೆ ಮೌಲ್ಯಗಳನ್ನು 'ನನ್ನಿ' ಮಾಡಿ ನಡೆದು ತೋರಲು ಹವಣಿಸುತ್ತಾನೆ, ಕರ್ಣ. ಇಂಥ ಹವಣಿಕೆಯನ್ನು ಗಮನಿಸಿಯೇ ಕವಿ "ನನ್ನಿಯೊಳಿನತನಯಂ" ಎಂದು ಕರೆದಿರುವನು.

ಪಂಪ ಭಾರತದಲ್ಲಿ 'ನನ್ನಿ'ಯೆಂಬ ಪದ ಕರ್ಣನನ್ನೊಳಗೊಂಡು ಅನೇಕ ರಿಗೆ ಅನ್ವಯಿಸಿ ಬಹಳಸಲ ಬಳಕೆಯಾಗಿದೆ. ದ್ರವಿಡಿಯನ್ ಎಟಿಮೊಲಾಜಿಕಲ್ ಡಿಕ್ಷನರಿಯಲ್ಲಿ 'ನನ್ನಿ' ಎಂಬುದಕ್ಕೆ ಅನೇಕ ಅರ್ಥಗಳಿದ್ದರೂ[2] ತಾನು ನಂಬಿದ ಮೌಲ್ಯವನ್ನು, ಅದಕ್ಕಿಂತ ನುಡಿದ ಮಾತನ್ನು ನೂರಕ್ಕೆ ನೂರು ನಡೆದು ತೋರಿಸುವುದು ಎಂಬ ಅರ್ಥದಲ್ಲಿಯೇ ಪಂಪ 'ನನ್ನಿ' ಪದವನ್ನು ಬಳಸಿದ್ದಾನೆ.

ಗುಣವನ್ನು ಜಾತಿಯಿಂದ ಅಳೆಯುತ್ತಲಿದ್ದ ಕಾಲವದು. ಕೀಳುಜಾತಿಯವನಾದ ತಾನು ಮೇಲುಜಾತಿಯವನೆನಿಸಿಕೊಳ್ಳುವುದು ಸಾಧ್ಯವಿರದ ಕಾರಣ, ಆ ಕೊರತೆಯನ್ನು ಉದಾತ್ತ ಮೌಲ್ಯಗಳಿಂದ ತುಂಬಿಕೊಳ್ಳುವ ಪ್ರಯತ್ನವೆನ್ನುವಂತೆ ಅತಿರೇಕದ ತ್ಯಾಗಗುಣ, ಅತಿರೇಕದ ವೀರಗುಣಗಳಿಂದ ವಿಜೃಂಭಿಸತೊಡಗಿ, ಪ್ರಾರಂಭದಲ್ಲಿಯೇ ವಾಸ್ತವದ ನೆಲಗಟ್ಟನ್ನು ಕಳೆದುಕೊಳ್ಳುತ್ತದೆ; ಈ ಪಾತ್ರ. ಹೀಗೆ ಮೈತುಂಬಿದಂತೆ ವರ್ತಿಸುವವರನ್ನು ವಂಚಿಸುವುದು, ದುರುಪಯೋಗಗೊಳಿಸಿಕೊಳ್ಳುವುದು ಸುಲಭ. ಹೀಗಾಗಿ ಕರ್ಣನ ತ್ಯಾಗಗುಣವನ್ನು ದ್ರವ್ಯದಾಹದ ಬ್ರಾಹ್ಮಣರು, ವೀರಗುಣವನ್ನು ಭೂದಾಹದ ಕ್ಷತ್ರಿಯರು ದುರುಪಯೋಗಿಸಿಕೊಂಡರು. ಅಂದರೆ ಅಂಗರಾಜ್ಯದ ರಾಜಗದ್ದುಗೆಯ ಮೇಲೆ ಕುಳಿತಿದ್ದರೂ ಮನದ ತಳದಲ್ಲಿ ಕೊರೆಯುವ ಕೀಳುಕುಲದವನೆಂಬ ಕೀಳರಿಮೆ (ಇನ್‌ಫೀರಿಯಾರಿಟಿ ಕಾಂಪ್ಲೆಕ್ಸ್), ಅದನ್ನು ವೀರ–ದಾನಗಳ ಮೂಲಕ ಮರೆಮಾಡಲು ತೋರುವ ಮೇಲರಿಮೆ

(ಸುಪೀರಿಯಾರಿಟಿ ಕಾಂಪ್ಲೆಕ್ಸ್) –ಹೀಗೆ ಉಭಯ ಮನಃಪ್ರವೃತ್ತಿಯ ತಾಕಲಾಟ ಕರ್ಣನ ವ್ಯಕ್ತಿತ್ವದ ಮೂಲದ್ರವ್ಯವಾಗಿರುವುದರಿಂದ, ಪ್ರಸಂಗ ಬಂದರೆ 'ಕುಲವೆತ್ತಿ ತೆಗಳಿ' ಇಲ್ಲವೆ 'ಗುಣವೆತ್ತಿ ಹೊಗಳಿ' ಅವನನ್ನು ಪರಿಸರ ದುರ್ಬಲಗೊಳಿಸುತ್ತಲಿದೆ. ಈ ಎರಡರಿಂದ ಕೊಸರಿಕೊಂಡು ನಿರ್ಲಿಪ್ತನಾಗಿ ನಿಲ್ಲುವುದು ಕರ್ಣನಿಗೆ ಕೊನೆಗೂ ಸಾಧ್ಯವಾಗಲಿಲ್ಲ. ಅವನ ದೌರ್ಬಲ್ಯದ ನೆಲೆ, ದುರಂತದ ಸೆಲೆ ಇದ್ದುದು ಇಲ್ಲಿ.

ಕರ್ಣ, ದಾನವನ್ನು ಕುಡಿದು ನಿಂತ ವೀರ. ಅವನ ವಿಷಯವಾಗಿ ಪಂಪ ಒಂದು ಪ್ರಸಂಗದಲ್ಲಿ ಹೇಳಿದ "ಎಂದುಂ ಪೋಗೆಂದನೆ ಮಾಣೆಂದನೆ ಪೆಱತೊಂದನೀವೆನೆಂದನೆ"[3] ಎಂಬ ಮಾತನ್ನು ಅವನ ಎಲ್ಲ ದಾನಪ್ರಸಂಗಗಳಿಗೂ ಅನ್ವಯಿಸಿ ಹೇಳಬಹುದು. ಒಮ್ಮೆ ವಟುವೇಷದಲ್ಲಿ ಬಂದ ಇಂದ್ರ "ಕವಚಮಂ ಕುಂಡಲಮಂ"ಬೇಡಿದರೆ ಹಿಂದು ಮುಂದು ನೋಡದೆ, ತಂದೆ ಸೂರ್ಯ ನೀಡಿದ ಎಚ್ಚ ರಿಕೆಯನ್ನೂ ಬದಿಗೊತ್ತಿ 'ನೆತ್ತರ್ ಪನಪನ ಪನಿಯೆ ತಿದಿಯುಗಿಯುವಂತುಗಿದು"[4] ಕೊಟ್ಟುಬಿಡುತ್ತಾನೆ. ಸಕಾರಣವೇ ಇಲ್ಲದ ಈ ಅತಿರೇಕದಾನ ಅಪಾಯದ ಆಹ್ವಾನವೇ ಆಗಿದೆ. ಇನ್ನೊಮ್ಮೆ ಇಂದ್ರನಟ್ಟಿದ ವಜ್ರಕೀಟಗಳು "ಕರ್ಣನೆರಡುಂ ತೊಡೆಯಮನುಳಿಯನೂಱೆ ಕೊಡಂತಿಯೊಳ್ ಬೆಟ್ಟದಂತೆ"[5] ಕೊರೆದರೂ ತೊಡೆಯ ಮೇಲೆ ತಲೆಯಿಟ್ಟು ಮಲಗಿದ ಗುರು ಪರಶುರಾಮನ ನಿದ್ರೆ ಕೆಡಬಾರದೆಂದು ಈ ಕೊರೆತವನ್ನು ಸಹಿಸುತ್ತಾನೆ. ಗುರುವಿನ ಅಷ್ಟು ಸಣ್ಣ ನಿದ್ರೆಗೋಸುಗ ಶಿಷ್ಯನಿಂದ ಇಷ್ಟು ದೊಡ್ಡ ತ್ಯಾಗವೆ? ಎಂದು ಪ್ರಶ್ನಿಸುವಂತಿದೆ, ಈ ಔದಾರ್ಯ. ಹೀಗೆ ಹಸ್ತಿನಾವತಿಗೆ ಬರುವ ಪೂರ್ವದಲ್ಲಿಯೇ ವಿದ್ಯಾರ್ಥಿ ಕರ್ಣ ಯುಕ್ತಾಯುಕ್ತತೆಯ ನೆಲೆಗಟ್ಟು ಇಲ್ಲದ ತ್ಯಾಗಬುದ್ಧಿಯನ್ನು ನನ್ನಿಗೊಳಿಸಲು ತೊಡಗಿದುದನ್ನು ಇಲ್ಲಿ ಕಾಣಬಹುದು.

ಕಾಲಾಂತರದಲ್ಲಿ ದ್ರೋಣಾಚಾರ್ಯರ ಶಿಷ್ಯತ್ವವಹಿಸಿ ಅರ್ಜುನನ ಕೂಡ ವಿದ್ಯಾವೈರ ಬೆಳೆಸಿಕೊಳ್ಳುತ್ತ, ಅರಸುಮಕ್ಕಳೊಡನೆ ಶಸ್ತ್ರವಿದ್ಯೆ ಕಲಿಯುತ್ತಾನೆ. ರಾಜ ಕುಮಾರರಿಗಾಗಿ ಮಾತ್ರ ಏರ್ಪಡಿಸಿದ್ದ ಬಿಲ್ಲುವಿದ್ಯೆಯ ಪ್ರದರ್ಶನ ಸಂದರ್ಭದಲ್ಲಿ ಸುಪಿರಿಯಾರಿಟಿ ಕಾಂಪ್ಲೆಕ್ಸ್ ಮೆರೆಯುವಂತೆ ರಾಜಕುಮಾರನಲ್ಲದ ಈ ಕರ್ಣ ಕರೆಯದಿದ್ದರೂ ಹೋಗಿ, ಜಾತಿ ಕಾರಣ ಅಪಮಾನಿತನಾಗಿ, ಕೌರವನ ಪಕ್ಷವನ್ನು ಸೇರಿಕೊಳ್ಳುತ್ತಾನೆ, ಅಲ್ಲ ಕೌರವ ಅವನನ್ನು ತನ್ನ ಪಕ್ಷಕ್ಕೆ ಎಳೆದುಕೊಳ್ಳುತ್ತಾನೆ. ಅದಕ್ಕೆ ಸಹಿ ಹಾಕಿದನೆಂಬಂತೆ ಈಗ ಕರ್ಣ ಕೌರವನಿಗೆ ಸ್ವಾಮಿಭಕ್ತ, ಜೋಳವಾಳಿ. ಇನ್ನು ಮೇಲೆ ಅರ್ಜುನನ ವೈರಕ್ಕೋ ಯಾವುದಕ್ಕೋ ಬಳಸಬೇಕಾಗಿದ್ದ ತನ್ನ ಶೌರ್ಯವನ್ನು ಒಡೆಯನಿಗಾಗಿ ಮಾತ್ರ ಮೀಸಲು ಹಿಡಿಯಬೇಕಾದುದು ಜೋಳವಾಳಿಯ ಕರ್ತವ್ಯ. ಇದು ಆತ ಆಹ್ವಾನಿಸಿಕೊಂಡ ಇನ್ನೊಂದು ತೊಡಕು. ಅಂದಿನಿಂದ ಅಂಗದೇಶದ ಅಧಿರಾಜನಾಗಿ ನಿತ್ಯದಾನಕ್ಕೆ ದೇವಸಬಳದ ಪದಿನೆಂಟುಕೋಟಿ ಪೊನ್ನುಗಳನ್ನು

ದಾನವೀಯುತ್ತ ಹೋಗುತ್ತಾನೆ. ವೀರಮರಣವನ್ನಪ್ಪುವ ದಿನವಂತೂ "ರಥ ತುರಗ ದಿವ್ಯಾಸ್ತ್ರಂಗಳುಳಿಯೆ ಪಸುರ್ಮಣಿಯನಪ್ಪೊಡಮುಳಿಯದಂತು"[6] ನೀಡುತ್ತಾನೆ. ಹೀಗೆ ಅವಾಸ್ತವವೆನಿಸುವ ದಾನಗುಣದ ಬಲೆಯನ್ನು ಹೆಣೆದುಕೊಳ್ಳುತ್ತ ಹೋಗುತ್ತಾನೆ.

ಹೀಗೆ ವಾಸ್ತವತೆಯ ನೆಲೆ ಕಳೆದುಕೊಂಡ ಕರ್ಣನ ಜೀವನದಲ್ಲಿ, ಅಗ್ನಿಪರೀಕ್ಷೆ ರೂಪದ ಘಟನೆಯೊಂದು ನಡೆದು ಹೋಗುತ್ತದೆ. ಕರ್ಣನಿಂದ ವಚನ ಪಡೆಯಲು ಕುಂತಿ ಅವನಿದ್ದ ಗಂಗಾತೀರಕ್ಕೆ ಬರುತ್ತಾಳೆ. ಆಗ ತಂದೆ ಸೂರ್ಯದೇವ ಅವಸರವಸರವಾಗಿ ಬಂದು "ನಾನು ಬೇಡವೆಂದರೂ ಇಂದ್ರನಿಗೆ ಕವಚ ಕೊಟ್ಟ ಹಾಗೆ, ಕುಂತಿಗೆ ಪುರಿಗಣೆಯನ್ನು ಕೊಡಬೇಡ" ಎಂದು ಎಚ್ಚರಿಸಿದರೂ "ಅರ್ಜುನ ಎದುರಾದರೂ ಪುರಿಗಣೆಯನ್ನು ಹಿಡಿಯುವುದಿಲ್ಲ. ಉಳಿದ ನಾಲ್ವರನ್ನು ಕೊಲ್ಲುವುದಿಲ್ಲ" ಎಂದು ಭಾಷೆ ಕೊಟ್ಟು, ಮಾಡಿದ ತಪ್ಪನ್ನೇ – ಅದಕ್ಕಿಂತ ದೊಡ್ಡ ತಪ್ಪನ್ನೇ – ಮತ್ತೆ ಮಾಡುತ್ತಾನೆ. ಈ ಹಿಂದೆ ಕುಲವೆತ್ತಿ ಮಾತನಾಡಿದರೆ "ಪಂದೆಯಂ ಪಾವಡರ್ದಂತೆ" ನಿರುತ್ತರನಾಗುತ್ತಿದ್ದ ಕರ್ಣ ಇನ್ನು ಮುಂದೆ ಹಾಗೆ ಆಡಿದ ದ್ರೋಣ, ಅಶ್ವತ್ಥಾಮರನ್ನು ಉಗ್ರವಾಗಿ ಪ್ರತಿಭಟಿಸುವುದನ್ನು ನೋಡಿದರೆ ನಿನ್ನೆಯ ಕೃಷ್ಣ ಸಂದರ್ಶನದಲ್ಲಿ ಕುಲದ ಬಗೆಗೆ ಇದ್ದ ಅವನ ಇನ್‌ಪೀಯಾರಿಟಿ ಕಾಂಪ್ಲೆಕ್ಸ್ ಕರಗಿ ಹೋಗಿದ್ದುದು ಸ್ಪಷ್ಟವಾಗುತ್ತದೆ. ಆದರೆ "ಅಜಿದೆಂ ಸೋದರರೆಂದು ಪಾಂಡವರನಿನ್ನೆಂತೆನ್ನರಂ ಕೊಲ್ವೆಂ, ಅಳ್ಕರೊಳೆನ್ನಂ ಪೊರೆದೆಯ್ದೆ ನಂಬಿದ ನೃಪಂಗೆಂತಾಜಿಯೊಳ್ ತಪ್ಪುವೆಂ"[7] ಎಂಬ ಬಿರುಕು ಭಾವ ತಲೆಯೆತ್ತಿ "ಎನ್ನೊಡಲನಾಂ ತವಿಪೆಂ ರಣರಂಗಭೂಮಿಯೊಳ್" ಎಂದು ಹತಾಶಕ್ಕೆ ತಿರುಗುತ್ತದೆ. ಮರುದಿನದ ಕುಂತಿ ಸಂದರ್ಶನದಲ್ಲಿ "ಎನ್ನನೆ ರಣದೊಳಟೆವೆಂ"[8] ಎಂದು ಮತ್ತೂ ಹತಾಶಕ್ಕೆ ತಿರುಗಿ, ಜೋಳದ ಪಾಳಿಯನ್ನೇ ಮರೆತು ಕೈಮೇಲೆ ಕೈಹಾಕುವಲ್ಲಿ ಆತನ ಮನಸ್ಸು ಪಾಂಡವರಿಗೆ, ಮೈ ದುರ್ಯೋಧನನಿಗೆ ಹಂಚಿಹೋಗುತ್ತದೆ. ಈಗ ದುರ್ಯೋಧನನ ಪರವಾಗಿಯೇ ನಿಂತಿದ್ದರೆ ಅವನ ನಡತೆಯನ್ನು ಯಾರೂ ಪ್ರಶ್ನಿಸುತ್ತಿರಲಿಲ್ಲ. ಕುಂತಿಯ ಪರವಾಗಿ ನಿಂತು ಎಲ್ಲರೂ ಪ್ರಶ್ನಿಸುವಂತೆ ಮಾಡಿಕೊಂಡ. ಹೀಗಾಗಿ ದುರ್ಯೋಧನನ 'ಸತ್ಯಂತಪರ ಏಕಾಂತ' ಸಂದರ್ಭಕ್ಕಿಂತ ಕರ್ಣನ ಈ 'ಕುಂತಿ ಏಕಾಂತ' ಸಂದರ್ಭ ತುಂಬ ವಿಶ್ವಾಸಘಾತಕವೆನಿಸುತ್ತದೆ. ಏಕೆಂದರೆ Social ethics ಬೇರೆ domestic ethics ಬೇರೆ. ಅದಕ್ಕಾಗಿಯೇ "ದಂಡಿನಲ್ಲಿ ಸೋದರಮಾವನೇ?" ಎಂಬ ಗಾದೆ ಹುಟ್ಟಿದುದು. ಹೀಗಿರುವಾಗ "ಅಜಿದೆಂ ಸೋದರರೆಂದು ಪಾಂಡವರನಿನ್ನೆಂತೆನ್ನರಂ ಕೊಲ್ವೆಂ" ಎಂಬ ಭಾವ ಅಂಕುರಿಸಿದುದೇ ಕರ್ಣನ ದೌರ್ಬಲ್ಯ. ಈವರೆಗೆ ಕೌರಮುಖಿಯಾಗಿದ್ದ ಪಾತ್ರ, ಕೃಷ್ಣ ಸಂದರ್ಶನದಲ್ಲಿ ಸ್ವಲ್ಪ ಹೊತ್ತು ಕೌರವ–ಪಾಂಡವ ಮುಖಿಯಾಗಿ, ಕುಂತಿ

ಸಂದರ್ಶನದಿಂದ ಪಾಂಡವಮುಖಿಯಾಗಿಯೇ ಬೆಳವಣಿಗೆ ಪಡೆಯುತ್ತ ನಡೆಯಿತು. ಆದುದರಿಂದಲೇ ರಣರಂಗದಲ್ಲಿ ತನ್ನ ಏಟಿಗೆ "ಮೂರ್ಛಾಗತನಾದ ಭೀಮನ ಕೊರಲೊಳ್ ಬಿಲ್ಲಂ ಕೋದು, ಮೇಗಿಲ್ಲದೆ ತೆಗೆದು..... ಅಂಬಿಕೆ ನುಡಿದ ನುಡಿ ನಿಲೆ ಮನದೊಳ್"[9] ಕೊಲ್ಲದೆ ಬಿಟ್ಟುಕೊಡುತ್ತಾನೆ. ಮತ್ತೊಮ್ಮೆ ಧರ್ಮರಾಜನಿಗೆ ಮರಣಾಂತಿಕ ಪೆಟ್ಟುಕೊಟ್ಟು "ನಸುನೊಂದು ನಂದಿಸದೆ ತನ್ನನೆ ನಿಂದಿಸಿ" ಕೊಂಡು, ಕೊಂತಿಗೆ "ನಾಲ್ವರೊಳಾರುಮಂ ಕೊಲ್ಲೆನೆಂದು ನುಡಿದ ತನ್ನ ನನ್ನಿಗೆ ಬನ್ನಂ ಬಂದಪುದೆಂದು"[10] ಮತ್ತೆ ಶಸ್ತ್ರಯೆತ್ತದೆ ಹಿಂಜರಿಯುತ್ತಾನೆ. ಅಷ್ಟರಲ್ಲಿ 'ನಕುಳಸಹದೇವರಿರ್ವರುಂ ಬಂದಾಂತೊಡವರನೇ ಗೆಯ್ವುದೆಂದು ಕರುಣಿಸಿ'[11] ಬಿಡುತ್ತಾನೆ. ಹೀಗೆ ನಾಲ್ವರನ್ನೂ ಕೊಲ್ಲದೆ ಕ್ಷಮಿಸಿ, ಮಾತೃವಚನವನ್ನು ಪಾಲಿಸಿದ. ಇನ್ನು "ಪುರಿಗಣೆ"ಯನ್ನು ಹಿಡಿಯದೆ ಅರ್ಜುನನೊಂದಿಗೆ ಹೋರಾಡಬೇಕು. ಇದನ್ನು ನಡೆಸಿಕೊಡುವುದಕ್ಕೋಸುಗ "ರೌದ್ರಶರ"ವನ್ನು ಅರ್ಜುನನ ಹಣೆಗೆ ಹೂಡುತ್ತಾನೆ. ಆಗ ಹಣೆಗೆ ಇಟ್ಟ ಗುರಿಯನ್ನು ಕಿತ್ತಿ "ಉರದೆಡೆಗೆ ತುಡೆ ಜಯಶ್ರೀಗಿರಲೆಡೆ ನಿನಗಪ್ಪುದು, ಆ ಸುಯೋಧನನೊಳ್ ಶ್ರೀಗಿರಲೆಡೆಯುವುದು"[12] ಎಂದ ಶಲ್ಯನ ಸೂಚನೆ ಯೋಗ್ಯವೆಂದು ಮನವರಿಕೆಯಾದರೂ, ಅರ್ಜುನ ಸತ್ತರೆ ತಮ್ಮಂದಿರಿಗೆ ವೇಳೆವಾಳಿಯಾಗಿರುವ "ಧರ್ಮಪುತ್ರನಟೆಗುಂ."[13] ಆಗ "ಉಳಿದ ನಿನ್ನ ಮಕ್ಕಳನಿನ್ನೇದೊರ್ದಮಳಿಯೆಂ"[14] ಎಂಬ ತನ್ನ ವಚನಕ್ಕೆ ತಪ್ಪಿದಂತಾಗುತ್ತದೆಯೆಂಬ "ಧರ್ಮಸೂಕ್ಷ್ಮತೆ"ಗೆ ಕಟ್ಟುಬಿದ್ದು, ಇಟ್ಟ "ಗುರಿಯನ್ನು ಕಿತ್ತಿ ಇಟ್ಟರೆ ತನ್ನ ಶೌರ್ಯಕ್ಕೆ ಅಪಮಾನ"ವೆಂದು ಹೇಳಿ ಜಾರಿಕೊಂಡು, ರೌದ್ರಶರವನ್ನು ಹಣೆಗೇ ಪ್ರಯೋಗಿಸುತ್ತಾನೆ. ಆಗ ಕೃಷ್ಣ ರಥವನ್ನು ಎಂಟು ಬೆರಳಿನಷ್ಟು ನೆಲದಲ್ಲಿ ಒತ್ತಿದುದರಿಂದ ಅರ್ಜುನನ ಕಿರೀಟ ಮಾತ್ರ ಉರುಳುತ್ತದೆ. ಹಾವಿನ ರೂಪದಲ್ಲಿ ತಿರುಗಿ ಬಂದ ಆ ಬಾಣ ತನ್ನ ಸೇಡಿನ ಕಥೆಯನ್ನು ಹೇಳಿ, 'ತನ್ನನ್ನು ಇನ್ನೊಮ್ಮೆ ಪ್ರಯೋಗಿಸು' ಎಂದು ಅಂಗಲಾಚಿ ಬೇಡಿಕೊಂಡರೂ "ಅಸಹಾಯಶೂರನಾದ ನಾನು ನಿನ್ನ ಸಹಾಯದಿಂದ ವೈರಿಯನ್ನು ಕೊಂದನೆಂಬ ನಿಂದೆಯನ್ನು ಹೊರಲಾರೆ" ಎಂದು 'ಧರ್ಮಸೂಕ್ಷ್ಮತೆ'ಯನ್ನು ಮುಂದುಮಾಡಿ ಮತ್ತೂ ಜಾರಿಕೊಳ್ಳುತ್ತಾನೆ. ಹೀಗೆ ತಾಯಿಯ ವಚನಕ್ಕೆ ಕಟ್ಟುಬಿದ್ದು ನಾಲ್ವರನ್ನೂ, ಎರಡು ಅವಕಾಶಗಳಲ್ಲಿ "ಧರ್ಮಸೂಕ್ಷ್ಮತೆ"ಗೆ ಕಟ್ಟುಬಿದ್ದು ಅರ್ಜುನನ್ನೂ ಕೊಲ್ಲದಿದ್ದುದನ್ನು ಗಮನಿಸಿಯೇ "ನನ್ನಿಯೊಳಿನತನಯಂ" ಎಂದು ಹೇಳಿದಂತಿದೆ, ಪಂಪ. ತಾಯಿಗೆ ಕೊಟ್ಟ ವಿಶ್ವಾಸದ್ರೋಹದ ವಚನವನ್ನು ಕೊನೆಯ ವರೆಗೆ ಸಮರ್ಥವಾಗಿಯೇ ನಡೆಸಿದನೆಂಬ ಅರ್ಥದ ಈ ಸ್ವಾಮಿದ್ರೋಹ ವರ್ತನೆಗೆ "ನನ್ನಿಯೊಳಿನತನಯಂ" ಕೀರ್ತಿಕೀರಿಟ ತಲೆಭಾರವೇ ಸರಿ.[15] ನಿಜ ಹೇಳುವುದಾದರೆ ದುರ್ಯೋಧನ ಒಳಗೊಳಗೆ ತೋರಿದ

'ಮಿತ್ರದ್ರೋಹ'ಕ್ಕಿಂತ ಕರ್ಣ ಒಳಗೊಳಗೆ ತೋರಿದ ಈ 'ಸ್ವಾಮಿದ್ರೋಹ' ತುಂಬ ಅಪಾಯಕಾರಿಯಾಗಿದೆ, 'ಮರೆಯ ಪಾಂಡವ' ರೂಪದ್ದಾಗಿದೆ, ಪಾಪರೂಪದ್ದಾಗಿದೆ. ಇದು 'ಜೋಳವಾಳಿ'ತನವಲ್ಲ, 'ಜೋಳಗಳ್ಳ'ತನವೆಂದು, ಹತ್ತನೆಯ ಶತಮಾನದ ಶಾಸನಸ್ಥ 'ಜೋಳವಾಳಿ' ನೀತಿಯನ್ನು ಅಭ್ಯಸಿಸಿದವರಿಗೆ ಸ್ಪಷ್ಟವಾಗುತ್ತದೆ. ಹೀಗಿದ್ದೂ ಕರ್ಣ ಹೆಜ್ಜೆ ಹೆಜ್ಜೆಗೆ 'ಜೋಳಕ್ಕೆ ತಪ್ಪಿಯುಂ ಬಾಳ್ವುದೇ?' ಎನ್ನುವುದು ಒಳ ಹೃದಯದ 'ವಚನ'ವಲ್ಲ; ತುದಿನಾಲಗೆಯ ನುಡಿಯೆನಿಸುತ್ತದೆ. 'ಜೋಳದ ಪಾಟೆ ನಿಜಾಧಿನಾಥನಾಹವದೊಳರಾತಿ ನಾಯಕರ ಪಟ್ಟನೆ ಪಾಜೆಸಿದ"[16] ಸ್ವತಃ ಜೋಳವಾಳಿ ಪಂಪ ಇದನ್ನು ಹೇಗೆ ಸಮರ್ಥಿಸಿಕ್ಕೊಳ್ಳುವನೋ ದೇವರೆ ಬಲ್ಲ.

ಕರ್ಣನಲ್ಲಿ ತ್ಯಾಗದಂತೆ ಎದ್ದು ಕಾಣುವ ಇನ್ನೊಂದು ಗುಣ ಸ್ವಾಮಿನಿಷ್ಠೆ. ಆದರೆ ಭಾರತಯುದ್ಧ ಬಾಗಿಲಿಗೆ ಬರುವ ಮೊದಲು ದುರ್ಯೋಧನ ಕೈಕೊಂಡ ದ್ಯೂತಪ್ರಸಂಗದಲ್ಲಿ ಶಕುನಿಯದೇ ಪಾತ್ರ; ಕರ್ಣ ಮೌನ ಆಟಗಾರ. ದ್ರೌಪದಿಯನ್ನು ಸಭೆಗೆ ಎಳೆದು ತರುವಲ್ಲಿ ದುಶ್ಯಾಸನ ಉತ್ಸಾಹಿ, ಕರ್ಣ ಮೌನ ಪ್ರೇಕ್ಷಕ. ಚಿತ್ರಾಂಗದನ ಯುದ್ಧ ಪ್ರಸಂಗದಲ್ಲಿ ಎಲ್ಲರಂತೆ ಈತನೂ ಅಸಹಾಯಕ. ದೂತ ಪ್ರಸಂಗದಲ್ಲಿ ದುರ್ಯೋಧನನೇ ಕೃಷ್ಣನ ಸವಾಲು ಎದುರಿಸುವವ; ಕರ್ಣ ದುರ್ಯೋಧನನ ತೊಡೆಸೋಂಕಿ ಕುಳಿತ ಮೌನಪ್ರೇಕ್ಷಕ. ದ್ರೌಪದಿ ಸ್ವಯಂವರ, ಗೋಗ್ರಹಣ ಪ್ರಸಂಗಗಳಲ್ಲಿ ಹೋರಾಡಿದ್ದರೂ ಅದು ಹತ್ತರಕೂಡ ಹನ್ನೊಂದು. ಅಂದರೆ ಕುರುಕ್ಷೇತ್ರ ಯುದ್ಧಪೂರ್ವದ ದಿನಗಳಲ್ಲಿ ದುರ್ಯೋಧನ ಕೈಗೆತ್ತಿಕೊಂಡ ಕಾರ್ಯಚಟುವಟಿಕೆಗಳಲ್ಲಿ ಕರ್ಣ ಕ್ರಿಯಾತ್ಮಕವಾಗಿ ಭಾಗವಹಿಸುವುದು ಹೋಗಲಿ, ಹಿತೈಷಿಯಾಗಿ ನಿಂತು ಸರಿಯೆಂದೂ ಹೇಳದೆ, ತಪ್ಪು ಎಂದೂ ಹೇಳದೆ ಮೌನ ತಾಳುತ್ತಾನೆ. ಈ ಮೌನಕ್ಕೆ, ನಿಷ್ಕ್ರಿಯತೆಗೆ ಎರಡು ಕಾರಣಗಳನ್ನು ಊಹಿಸಬಹುದು:

1. ತಾನು ಸಿಂಹಾಸನದ ಮೇಲೆ ಕುಳಿತಿದ್ದರೂ ಶೂದ್ರತ್ವಕಾರಣವಾಗಿ ತನ್ನ ಮಾತಿಗೆ – ಕೃತಿಗೆ ಈ ಬ್ರಾಹ್ಮಣ – ಕ್ಷತ್ರಿಯ ಪರಿವಾರದಲ್ಲಿ ಬೆಲೆಬಾರದೆಂಬ ಆತಂಕ.
2. ಕೌರವನ ಕುಟಿಲ ಚಟುವಟಿಕೆಗಳು ಬಹುಶಃ ಅವನ ಅಂತರಂಗದ ಅಂತರಂಗಕ್ಕೆ ಒಪ್ಪಿತವಿಲ್ಲ.

ಹೀಗಾಗಿ ಕುಲಹೀನ ಸೂತನಿಗೆ ಮಗನೆನಿಸಿದುದು ಒಂದು ದುರಂತವಾದರೆ, ಗುಣಹೀನ ಕೌರವನಿಗೆ ಸೇವಕನಾದುದು ಇನ್ನೊಂದು ದುರಂತವೆನಿಸಿದೆಯೇನೋ ಅವನ ಮನಸ್ಸಿಗೆ. ಆದುದರಿಂದ ಕುರುಕ್ಷೇತ್ರ ಯುದ್ಧದ ವರೆಗೆ ದುರ್ಯೋಧನನಿಗೆ ಮೂಕ ಅನುಯಾಯಿಯಂತೆ ವರ್ತಿಸಿದರೆ, ಯುದ್ಧ ಸಂದರ್ಭದಲ್ಲಿ ವಿಶ್ವಾಸದ್ರೋಹಿ ಅನುಯಾಯಿಯಂತೆ ವರ್ತಿಸಿದನೆಂದು ಅವನ

ನಡತೆಯನ್ನು ಹಂಚಿ ಹೇಳಬೇಕಾಗುತ್ತದೆ. ದುರ್ಯೋಧನನ ದುಷ್ಟಕಾರ್ಯಗಳಲ್ಲಿ ಭಾಗವಹಿಸುವಂತೆ ಕರ್ಣನನ್ನು ಚಿತ್ರಿಸಿ, ಅವನಿಗೆ ಕುಂದು ತರಬಾರದೆಂದು ಪಂಪ ಹೀಗೆ ಮಾಡಿರುವನೆಂದು ಹೇಳಬೇಕೆಂದರೆ, "ದುಶ್ಶಾಸನ ಕರ್ಣ ಶಕುನಿ ಸೈಂಧವರೆಂಬ ದುಷ್ಟಚತುಷ್ಟಯದೊಳ್"[17] ಎಂಬ ಆತನ ಮಾತು ಅಡ್ಡ ಬರುತ್ತದೆ. ಹೀಗಿರುವ ದುರ್ಯೋಧನನ ಆಸ್ಥಾನದ ಈ ಮೂಕಪಾತ್ರಕ್ಕೆ ಮಾತು ಬಂದುದು ಕೃಷ್ಣನ ಭೇದೋಪಾಯದಿಂದ. ಅಂದಿನಿಂದ ಅವನ ಅಂತರಂಗದಲ್ಲಿ ಕೊರೆಯುತ್ತಲಿದ್ದ 'ಕುಲಹೀನ' ಭಾವನೆ ವೈಯಕ್ತಿಕವಾಗಿ ದೂರವಾಯಿತು ನಿಜ. ಆದರೆ ಒಂದು ಕಡೆಯಿಂದ ದುರ್ಯೋಧನನಿಗೆ ವಂಚಿಸಿದ ಉರುಲು, ಇನ್ನೊಂದು ಕಡೆಯಿಂದ ಕುಂತಿಗೆ ಕೊಟ್ಟಿದ್ದ ವಚನದ ಉರುಲು ಬಿಗಿಯಾಗತೊಡಗಿತು. ಆಗ ಈ ಪಾತ್ರದಲ್ಲಿ ಸಹಜವಾಗಿಯೇ ಹತಾಶಾಭಾವದ ಚಟುವಟಿಕೆ ಪ್ರಾರಂಭವಾಗುತ್ತದೆ; ಆಗ ಆಡಿದ ಮಾತುಗಳು ಆವೇಶದ ಪ್ರತೀಕವೆನಿಸಿ ಹಾಗೂ ಹೀಗೂ ವ್ಯಕ್ತವಾಗುತ್ತ ಹೋಗುತ್ತವೆ. ಕೌರವನಿಗೆ ಅನ್ಯಾಯ ಬಗೆಯಲಾರೆನೆಂದೂ ಕೃಷ್ಣನಿಗೆ ಹೇಳುತ್ತಾನೆ; ಪಾಂಡವರನ್ನು ಕೊಲ್ಲಲಾರನೆಂದೂ ಕುಂತಿಗೆ ಹೇಳುತ್ತಾನೆ. "ಪಗೆವರ ನಿಟ್ಟೆಲುವಂ ಮುಱಿವೊಡೆನಗೆ ಪಟ್ಟಂಗಟ್ಟಾ"[18] ಎಂದು ಭೀಷ್ಮ ಪಟ್ಟಬಂಧ ಸಂದರ್ಭದಲ್ಲಿ ತವಕಿಸುತ್ತಾನೆ; ತರುವಾಯ ಪಟ್ಟಕಟ್ಟಲು ಬಂದರೆ "ಸುರಸಿಂಧೂದ್ಭವನಿಂ ಬಟಿಕ್ಕೆ ಪೆಱರಾರ್ ಸೇನಾಧಿಪತ್ಯಕ್ಕೆ ತಕ್ಕರ್, ಲೋಕೈಕಧನುರ್ಧರಂ ಕಳಶಜಂ ತಕ್ಕಂ"[19] ಎಂದು ಹೇಳಿ ದೊಡ್ಡಸ್ತಿಕೆ ಮೆರೆಯುತ್ತಾನೆ. "ಗಂಗಾಸುತಂ ಪೃಥಾಸುತರಂ ಗೆಲ್ದೊಡೆ ತಪಕೆ ಪೋಪೆಂ"[20] ಎಂದು ಭೀಷ್ಮರ ಶೌರ್ಯವನ್ನು ಪ್ರಶ್ನಿಸುತ್ತಾನೆ; "ನಿಮ್ಮಡಿಯುಂ ಗೆಲ ಲರಿಯರುಮಾ ಪಾಂಡುಸುತರನೆಮ್ಮಂದಿಗರಚ್ಚರಿಯಲ್ತೆ ಗೆಲ್ವರೆಂಬುದು"[21] ಎಂದೂ ಭೀಷ್ಮರ ಶೌರ್ಯವನ್ನು ಒಪ್ಪಿಕೊಳ್ಳುತ್ತಾನೆ. ಈ ತಾಳಮೇಳವಿಲ್ಲದ ಮಾತುಗಳು ಅವನ ಗೊಂದಲ ಮನಸ್ಥಿತಿಯನ್ನೋ ಹತಾಶಾ ಮನೋಭಾವವನ್ನೋ ತೆರೆದು ತೋರಿಸುತ್ತವೆ. ಇದಲ್ಲದೆ ನನ್ನನ್ನು ಬಿಟ್ಟು ಭೀಷ್ಮನಿಗೆ ಪಟ್ಟಕಟ್ಟಿದ ಕಾರಣ, ಅವನು ಬದುಕಿರುವ "ಅನ್ನೆಗಂ ಬಿಲ್ವಿಡಿಯೆಂ"[22] ಎಂದು ದುಡುಕಿ 18 ದಿನದ ಯುದ್ಧದಲ್ಲಿ 10 ದಿನ ನಿಷ್ಕ್ರಿಯವಾಗಿ ಉಳಿದುದು ಒಡೆಯನ ಯುದ್ಧ ಯೋಜನೆಯ ವಿರುದ್ಧ ಸ್ವೀಕರಿಸಿದ ತಪ್ಪು ತೀರ್ಮಾನವೇ ಸರಿ. ಮುಂದೆ ತಾಯಿಗೆ ಮಾತು ಕೊಟ್ಟ ಮೇರೆಗೆ ರಣ ರಂಗದಲ್ಲಿ ನಾಲ್ಕು ಜನ ಏಕೆ, ಐದೂ ಜನ ಪಾಂಡವರನ್ನು ಒಳಗೆ ರಕ್ಷಿಸುತ್ತ, ಅಣಕು ಯುದ್ಧವೆಂಬಂತೆ ಮೇಲೆ ಸ್ವಾಮಿಭಕ್ತಿಯನ್ನು ಸಾರುವುದಕ್ಕೆ ಏನು ಅರ್ಥ? ಹೋರಾಡಿ 'ಜೋಳವಾಳಿ'ಯೂ ಎನಿಸಿಕೊಳ್ಳಬೇಕು, ಮಾತೃವಚನ ಪಾಲಿಸಿ 'ನನ್ನಿಕಾರ'ನೂ ಎನಿಸಿಕೊಳ್ಳಬೇಕು ಎಂಬ ಬಿರುಕು ಈ ಪಾತ್ರದಲ್ಲಿ ಕಂಡುಬರುವುದರಿಂದ "ನನ್ನಿಯೊಳಿನತನಯಂ" ಎಂಬ ಮಾತು ಇಲ್ಲಿ ಅರ್ಥ

ಕಳೆದುಕೊಳ್ಳುವುದೆಂದೇ ಹೇಳಬೇಕು.[23]

ಮೂಲತಃ ವೈಯಕ್ತಿಕವಾಗಿ, ಅರ್ಜುನನೊಂದಿಗೆ ವಿದ್ಯಾವೈರ ಸಾಧಿಸುವುದು ಕರ್ಣನಿಗೆ ಬೇಕಾಗಿದ್ದಿತು, ಪಾಂಡವರೊಂದಿಗೆ ದಾಯಾದವೈರ ಸಾಧಿಸಿಸುವುದು ದುರ್ಯೋಧನನಿಗೆ ಬೇಕಾಗಿದ್ದಿತು. ಆಮೇಲೆ ಅವರಿಬ್ಬರ ಸ್ನೇಹದಿಂದಾಗಿ ಕರ್ಣನ ವೈರಸಾಧನೆಗೆ ದುರ್ಯೋಧನ ರಾಜಕೀಯ ವ್ಯವಸ್ಥೆಯನ್ನು ಒದಗಿಸಿಕೊಟ್ಟಂತಾಯಿತು, ದುರ್ಯೋಧನನ ವೈರಸಾಧನೆಗೆ ಕರ್ಣ ಊರುಗೋಲಾದಂತಾಯಿತು. ಹೀಗಾಗಿ ಒಡೆಯನ ಸ್ವಾಮಿಭಕ್ತಿಗಿಂತ ಅರ್ಜುನನ ಬಗೆಗಿನ ವೈಯಕ್ತಿಕ ವೈರವೇ ಕರ್ಣನನ್ನು ಕೊನೆಯ ವರೆಗೆ ಕೌರವಪಕ್ಷದಲ್ಲಿ ನಿಲ್ಲುವಂತೆ ಮಾಡಿರಲು ಸಾಧ್ಯವಿದ್ದು, ರಣ ರಂಗದಲ್ಲಿ 'ಧರ್ಮಸೂಕ್ಷ್ಮತೆ' ಅಡ್ಡ ಬರಲು ಆ ವೈರವನ್ನೂ ಸಾಧಿಸಿಕೊಳ್ಳಲಿಲ್ಲ. ಇಷ್ಟೆಲ್ಲ ವೈಯಕ್ತಿಕ ದೌರ್ಬಲ್ಯ, ಪರಿಸರದ ಕೌಟಿಲ್ಯಗಳು ಒಳ ಹೊರಗೆ ಆವ ರಿಸಿದ್ದರೂ ಕರ್ಣ ಅವುಗಳನ್ನು ಮೀರಿ 'ನನ್ನಿಕಾರ'ನಾಗಿ ಬೆಳೆದು 'ಪೂಜ್ಯ'ರ ಸಾಲಿನಲ್ಲಿ ನಿಲ್ಲುವನೆಂದು ಹೇಳಲಿಕ್ಕೆ ಪಂಪಭಾರತದಲ್ಲಿ ತಕ್ಕ ಪುರಾವೆಗಳು ಅಷ್ಟಾಗಿ ಸಿಗುವುದಿಲ್ಲ. ಜಾತಿಹೀನತೆಯಿಂದಾಗಿ ತನಗೆ ಗೌರವ ಸಿಗದಿದ್ದುದಕ್ಕೆ ಕೀಳರಿಮೆ ಮೇಲರಿಮೆಗಳ ವ್ಯಕ್ತಿಯಾಗಿ, ಜಾತಿವಂತನೆಂದು ಗೊತ್ತಾದ ಮೇಲೆ ಹತಾಶನಾಗಿ, ಉದ್ದಕ್ಕೂ ಅತಿರೇಕ ಕ್ರಿಯೆ – ತಪ್ಪು ತೀರ್ಮಾನ – ಉದ್ರಿಕ್ತ ಮಾತುಗಳಿಂದ ಬೆಳೆದುನಿಂತ ಅವನ ತ್ಯಾಗಗುಣ ಅವನಿಗೆ ಉರುಲಾಗಿ,[24] ಅವನ ಸ್ವಾಮಿನಿಷ್ಠೆ ಅವನ ಒಡೆಯನಿಗೆ ನಿಷ್ಪ್ರಯೋಜಕವಾಗಿ ಪರಿಣಮಿಸುತ್ತದೆ. ಆದುದರಿಂದ ಮೂಲಭಾರತದ ಹೊರ ಚೌಕಟ್ಟನ್ನು ಮುರಿಯದೆ, ಒಳಗಿನ ಕರ್ಣಪಾತ್ರವನ್ನು ಉದಾತ್ತೀಕರಿಸುವ ಪ್ರಯತ್ನದಲ್ಲಿ ಪಂಪ ವಿಫಲನಾಗಿರುವನೆಂದೂ, "ನನ್ನಿಯೊಳಿನತನಯಂ" ಎಂಬ ಮಾತನ್ನು ಸೀರಿಯಸ್ಸಾಗಿ ಹೇಳಿದ್ದರೆ ಪಂಪನ ತಪ್ಪು, ಸೀರಿಯಸ್ಸಾಗಿ ಭಾವಿಸಿದರೆ ನಮ್ಮ ತಪ್ಪು ಎಂದೂ ಹೇಳಬೇಕಾಗುತ್ತದೆ.[25]

**ಅಡಿಟಿಪ್ಪಣಿಗಳು:**

1. "ವರ್ಣಕ–ಕತೆ" ಈ ಶಬ್ದಗಳ ವಿವರಣೆಗಾಗಿ "ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ", ಪು.51 ನೋಡಿರಿ.
2. T. Burrow, M.B, Emeneau – DED P. 2986
3. ಪಂ. ಭಾ. 1–102.
4. ಪಂ. ಭಾ. 1–102 ಗ.
5. ಪಂ. ಭಾ. 1–104 ಗ.
6. ಪಂ. ಭಾ. 12–108 ಗ.
7. ಪಂ. ಭಾ. 9–71.

8. ಪಂ. ಭಾ. 9–87.
9. ಪಂ. ಭಾ. 11–143 ಗ.
10. ಪಂ. ಭಾ. 12–117 ಮತ್ತು 117 ಗ.
11. ಪಂ. ಭಾ. 12–117 ಗ.
12. ಪಂ. ಭಾ. 12–195.
13. ಪಂ. ಭಾ. 13–15.
14. ಪಂ. ಭಾ. 9–87.
15. "ದುಃಖದ ಕಾಲದಲ್ಲಿ ಆಡುವ ಮಾತು ವಿಮರ್ಶೆಯ, ತೂಕದ ಮಾತುಗಳಲ್ಲ. ಕಡ್ಡಿಯಿದ್ದುದನ್ನೂ ಗುಡ್ಡವಾಗಿ ಮಾಡಿ ಹೇಳಿಕೊಳ್ಳುವ ಹೊತ್ತು ಅದು. ಆಗ ತೀರ ತೂಗಿ ಮಾತನಾಡುವುದು ಯೋಗ್ಯವೆನಿಸುವುದಿಲ್ಲ. ಅವರಿಗೆ ಮಡಿದವರ ಬಗೆಗೆ ದುಃಖ ಕಡಿಮೆಯೆಂಬುದರ ಸೂಚಕವಾಗಿ ಅವರು ಸಹಾನುಭೂತಿ, ಅಂತಃಕರಣ ಕಡಿಮೆಯೆಂಬ ಆರೋಪಕ್ಕೆ ಈಡಾಗಬೇಕಾಗುತ್ತದೆ. ಆದುದರಿಂದ ಮಡಿದ ಕಾಲಕ್ಕೆ ಆಡಿದ ಮಾತುಗಳು ಯಾವನಾದರೊಬ್ಬನ ನಿಜವಾದ ಗುಣವರ್ಣನೆಯೆಂದು ಗ್ರಹಿಸುವುದು ಸಮರ್ಪಕವಾಗಲಾರದು. ಪಂಪ ಮತ್ತು ಕುಮಾರವ್ಯಾಸರ ಕರ್ಣನ ಮರಣಾ ನಂತರದ ವರ್ಣನೆಗಳೂ ಇವೇ ಬಗೆಯಾಗಿವೆ." (ಡಾ. ಶಂ.ಬಾ. ಜೋಶಿ. ಕರ್ಣನ ಮೂರು ಚಿತ್ರಗಳು. ಪು.ಸಂ. 33–34).
16. ಪಂ. ಭಾ. 14–50.
17. ಪಂ. ಭಾ. 6–67 ಗ.
18. ಪಂ. ಭಾ. 10–17.
19. ಪಂ. ಭಾ. 11–53.
20. ಪಂ. ಭಾ. 10–22.
21. ಪಂ. ಭಾ. 12–55
22. ಪಂ. ಭಾ. 10–22
23. ಪಾಂಡವನನ್ನು ಕೊಲ್ಲುವುದಿಲ್ಲವೆಂಬ ನಿರ್ಧಾರಮಾಡಿದ ಕರ್ಣನು, ದ್ರೋಣರ ತರುವಾಯ ಸೇನಾಪತಿ ಪದವನ್ನಾದರೂ ಸ್ವೀಕರಿಸದೆ ಇದ್ದರೂ ಸರಿಯಾಗುತ್ತಿತ್ತು. ಅಶ್ವತ್ಥಾಮನನ್ನು ಹಿಂದಿಕ್ಕಿ ತಾನೇ ವೀರಪಟ್ಟವನ್ನು ಕಟ್ಟಿಸಿಕೊಂಡನು. ಪ್ರಾಮಾಣಿಕವಾಗಿ ಅರ್ಜುನಾದಿಗಳನ್ನು ಸಂಹರಿಸಿಯೇ ಬಿಡುವೆನೆಂದು ಸನ್ನದ್ಧನಾದ ಅಶ್ವತ್ಥಾಮನಿಗೇ ಸೇನಾಪತಿ ಪದವನ್ನು ಬಿಟ್ಟಿದ್ದರೆ ನಿಜವಾಗಿಯೂ ದುರ್ಯೋಧನನ ಕಲ್ಯಾಣಕರ್ತನೆಂದು ಹೇಳಬಹುದಾಗಿತ್ತು. ತಾನು ಮೊದಲೆ (ಅನಿವಾರ್ಯನಾಗಿ ಪ್ರವಾಹಪತಿತನಾಗಿ) ವಚನದ ಕಟ್ಟಿನಲ್ಲಿ ಸಿಕ್ಕು ಬಿದ್ದುದರಿಂದ ಆ ಮಾತನ್ನು ದುರ್ಯೋಧನನಿಗೆ ತಿಳಿಸಿ, ಅಶ್ವತ್ಥಾಮನಿಗೇ ಸೇನಾಪತಿಯನ್ನು ಮಾಡಲು ತನ್ನ ಒಪ್ಪಿಗೆ ಕೊಟ್ಟಿದ್ದರೆ ಕರ್ಣನು ಪ್ರಾಮಾಣಿಕ ಸತ್ಯವಂತನೆಂಬ ಹೊಗಳಿಕೆಗೆ ತಕ್ಕವನಾಗುತ್ತಿದ್ದನು. (ಶಂ. ಬಾ. ಜೋಶಿ. ಕರ್ಣನ ಮೂರು ಚಿತ್ರಗಳು. ಪು.ಸಂ. 32).
24. "ಕರ್ಣನ ಚಾಗ" ಆದರ್ಶವೇ? 'ದೇಶ ಕಾಲ ಪಾತ್ರಗಳ ವಿವೇಕವಿಲ್ಲದೆ ಮನಬಂದಂತೆ ಕೊಡುವ ದಾನ ಹೀನದಾನ, ತಾಮಸದಾನ' (ಶಂ. ಬಾ. ಜೋಶಿ. ಕರ್ಣನ ಮೂರು ಚಿತ್ರಗಳು. ಪು.ಸಂ. 34).
25. ಈ ಲೇಖನ ಬರೆದು ವಿಚಾರ ಸಂಕಿರಣದಲ್ಲಿ ಓದಿ ಮುಗಿಸಿದ ನಂತರ ಡಾ. ಶಂ. ಬಾ. ಜೋಶಿ ಅವರ "ಕರ್ಣನ ಮೂರು ಚಿತ್ರಗಳು" ಕೃತಿ ನನ್ನ ಗಮನಕ್ಕೆ ಬಂದಿತು. ಬಹಳಷ್ಟು ಕಡೆಗೆ ಅವರ ನನ್ನ ಅಭಿಪ್ರಾಯಗಳು ಒಂದೇ ಬಗೆಯಾಗಿರುವುದರಿಂದ ಅವುಗಳನ್ನು ಅಲ್ಲಲ್ಲಿ ಅಡಿಟಿಪ್ಪಣಿ ಮೂಲಕ ಕೊಡಲಾಗಿದೆ.

**ಲೇಖನ ಕೃಪೆ:** ಕಲಬುರ್ಗಿ ಎಂ. ಎಂ. (2018). ಮಾರ್ಗ: ಸಂಪುಟ–1. ಸಪ್ನ ಬುಕ್ ಹೌಸ್. ಬೆಂಗಳೂರು.